ಪ್ರಾರ್ಥನೆ

# ಶ್ರೀಶಾರದಾದೇವ್ಯಷ್ಟಕದಿಂದ

**ಬ್ರಹ್ಮಸ್ವರೂಪಿಣಿ ಶಿವೇ ಶುಭದೇ ಶರಣ್ಯೇ**
**ಚೈತನ್ಯದಾಯಿನಿ ಭವಾಂಬುಧಿಪಾರನೇತ್ರಿ ।**
**ಶಾಂತಿಪ್ರದೇ ಸುವಿಮಲೇ ಸಕಲಾರ್ತಿನಾಶೇ**
**ಮಾತರ್ವಿರಾಜ ಸತತಂ ಮಮ ಹೃತ್ಸರೋಜೇ ॥ ೧ ॥**

ಬ್ರಹ್ಮಸ್ವರೂಪಿಣಿ, ಶಿವೆ, ಶುಭವನ್ನು ನೀಡುವವಳೆ, ಶರಣ್ಯಳೆ, ಚೈತನ್ಯವನ್ನು ನೀಡುವವಳೆ, ಸಂಸಾರಸಾಗರದ ದಡವನ್ನು ದಾಟಿಸುವಂಥ ದಿವ್ಯಚಕ್ಷುಗಳನ್ನು ಹೊಂದಿದವಳೆ, ಶಾಂತಿಯನ್ನು ಕರುಣಿಸುವ, ಪರಿಶುದ್ಧಳಾದ, ಎಲ್ಲ ಬಯಕೆಗಳನ್ನೂ ಪೂರ್ಣಗೊಳಿಸುವ ಹೇ ಮಾತೆ, ನೀನು ನನ್ನ ಹೃದಯವೆಂಬ ಕಮಲದಲ್ಲಿ ಸದಾ ವಿರಾಜಮಾನಳಾಗಿ ನೆಲೆಸು.

**ವೇದಾಂತವೇದ್ಯಪರತತ್ತ್ವ ಸುಮೂರ್ತರೂಪಾ**
**ಆದ್ಯಂತಮಧ್ಯರಹಿತಾ ಶ್ರುತಿಸಾರಭೂತಾ ।**
**ಏಕಾಽದ್ವಯಾ ಹಿ ಪರಮಾ ಪ್ರಕೃತಿಸ್ತ್ವಮಾದ್ಯಾ**
**ಮಾರ್ತರ್ವಿರಾಜ ಸತತಂ ಮಮ ಹೃತ್ಸರೋಜೇ ॥ ೨ ॥**

ವೇದಾಂತದಿಂದ ತಿಳಿಯಲ್ಪಡುವ ಪರಮ ತತ್ತ್ವವು ಸ್ಪಷ್ಟವಾಗಿ ಮೂರ್ತಗೊಂಡಂತೆ ಇರುವವಳೆ, ಆದಿ-ಮಧ್ಯ-ಅಂತ್ಯರಹಿತಳೆ, ಸಮಸ್ತ ವೇದಗಳ ಸಾರಭೂತಳಾಗಿ ಇರುವವಳೆ, ಎರಡಿಲ್ಲದ ಏಕವಾದ ಪರಮ ಪ್ರಕೃತಿಯೂ ಆದ್ಯಳೂ ಆದ ಹೇ ಮಾತೆ, ನೀನು ನನ್ನ ಹೃದಯವೆಂಬ ಕಮಲದಲ್ಲಿ ಸದಾ ವಿರಾಜಮಾನಳಾಗಿ ನೆಲೆಸು.

**ಮಾಯಾಮನುಷ್ಯತನುಧಾರಿಣಿ ವಿಶ್ವವಂದ್ಯೇ**
**ಲೀಲಾವಿಲಾಸಕರಿ ಚಿನ್ಮಯದಿವ್ಯರೂಪೇ ।**
**ಸೃಷ್ಟಿಸ್ಥಿತಿಪ್ರಲಯಕಾರಿಣಿ ವಿಶ್ವಶಕ್ತೇ**
**ಮಾತರ್ವಿರಾಜ ಸತತಂ ಮಮ ಹೃತ್ಸರೋಜೇ ॥ ೩ ॥**



ಮಾಯೆಯ ಮೂಲಕ ಮನುಷ್ಯದೇಹವನ್ನು ಧರಿಸಿ ವಿಶ್ವವಂದ್ಯಳಾದವಳೆ, ಲೀಲೆಯ ವಿಲಾಸದಿಂದ ದಿವ್ಯವಾದ ಚಿನ್ಮಯ ರೂಪವನ್ನು ಧರಿಸಿದವಳೆ, ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುವ ವಿಶ್ವ ಶಕ್ತಿಯಾದ ಮಾತೆಯೇ, ನೀನು ನನ್ನ ಹೃದಯವೆಂಬ ಕಮಲದಲ್ಲಿ ಸದಾ ವಿರಾಜ ಮಾನಳಾಗಿ ನೆಲೆಸು.

**ಸಚ್ಚಿತ್ಸುಖಾನುಭವದಾಯಿನಿ ಬೋಧರೂಪೇ**
**ವಿಶ್ವೇಶ್ವರಿ ಪ್ರಣತಪಾಲಿನಿ ಸಿದ್ಧಿದಾತ್ರಿ ।**
**ಶ್ರೀಶಾರದೇ ಭುವನಮಂಗಲದಿವ್ಯಮೂರ್ತೇ**
**ಮಾತರ್ವಿರಾಜ ಸತತಂ ಮಮ ಹೃತ್ಸರೋಜೇ ॥ ೪ ॥**

ಸತ್-ಚಿತ್-ಆನಂದಗಳ ಅನುಭವವನ್ನು ನೀಡುವವಳೆ, ಎಲ್ಲ ಅರಿವುಗಳ ಮೂಲಕ ವ್ಯಕ್ತಳಾಗುವವಳೆ, ವಿಶ್ವೇಶ್ವರಿ, ಶರಣಾದವರನ್ನು ಪಾಲಿಸಿ ಸಿದ್ಧಿಯನ್ನು ಕರುಣಿಸುವವಳೆ, ಶ್ರೀ ಶಾರದೆಯೆ, ಸಮಸ್ತ ಜಗತ್ತಿಗೆ ಮಂಗಳವನ್ನುಂಟುಮಾಡುವ ದಿವ್ಯಮೂರ್ತಿಯಾದ ಹೇ ಮಾತೆ, ನೀನು ನನ್ನ ಹೃದಯವೆಂಬ ಕಮಲದಲ್ಲಿ ಸದಾ ವಿರಾಜ ಮಾನಳಾಗಿ ನೆಲೆಸು.

ಸೂಕ್ತಿಪ್ರಭ

## ಶ್ರೀಮಾತೆಯವರ ಉಪದೇಶಗಳು

**ಈ** ದೇಹದಲ್ಲಿದ್ದುಕೊಂಡು ಬದುಕಿರುವ ತನಕವೂ ಸುಖವೆಂಬುದು ಇರುವುದಿಲ್ಲ. ಈ ಪ್ರಪಂಚವೆಲ್ಲ ದುಃಖದಿಂದ ತುಂಬಿದೆ. ಸುಖವೆಂಬುದು ಬರಿಯ ಶಬ್ದ ಮಾತ್ರ. ಶ್ರೀರಾಮಕೃಷ್ಣರ ಕೃಪೆಗೆ ಪಾತ್ರರಾದವರು ಮಾತ್ರ ಅವರನ್ನು ದೇವರೆಂದು ಗುರುತಿಸುವರು. ಅವರಿಗೆ ಮಾತ್ರ ನಿಜವಾದ ಆನಂದ ಲಭಿಸುವುದು.

**ಎ**ಚ್ಚರಿಕೆಯಿಂದ ಜೀವನ ನಡೆಸಬೇಕು. ಪ್ರತಿಯೊಂದು ಕಾರ್ಯಕ್ಕೂ ಅದರ ಫಲ ಇದ್ದೇ ಇರುವುದು. ಆದ್ದರಿಂದ ಇತರರ ಬಗ್ಗೆ ಕಠಿಣ ಮಾತುಗಳನ್ನಾಡುವುದು ಅಥವಾ ಇತರರ ದುಃಖಕ್ಕೆ ಕಾರಣರಾಗುವುದು ಒಳ್ಳೆಯದಲ್ಲ.

**ಒಂ**ದು ವಸ್ತುವನ್ನು ಅದರ ಬೆಲೆಯಿಂದ ಅಳೆಯಬಹುದೆ? ಪ್ರೀತಿ, ಭಕ್ತಿಯಿಂದ ನೀಡಿದ ವಸ್ತು ಮಾತ್ರವೇ ಶ್ರೇಷ್ಠವಾದದ್ದು.

**ಭಕ್ತ:** ಮಾನವ ತನ್ನ ಸ್ವಪ್ರಯತ್ನದಿಂದ ಏನನ್ನೂ ಮಾಡಲಾರ. ದೇವರೇ ಪ್ರತಿಯೊಂದನ್ನೂ ಮಾಡುತ್ತಿದ್ದಾನೆ.

**ಶ್ರೀಮಾತೆ:** ಅದು ನಿಜ. ಆದರೆ ಅವನಿಗೆ ಯಾವಾಗಲೂ ಅದರ ಅರಿವು ಇರುವುದೆ? ಅಹಂಕಾರದಿಂದ ತುಂಬಿ ಜನರು ಭಾವಿಸುತ್ತಾರೆ, ಕರ್ಮಕ್ಕೆ ಸಂಬಂಧಪಟ್ಟಂತೆ ತಾವು ಸ್ವತಂತ್ರರು ಎಂಬುದಾಗಿ. ಅವರು ದೇವರನ್ನು ಅವಲಂಬಿಸುವುದಿಲ್ಲ. ಯಾರು ದೇವರನ್ನೇ ಆಶ್ರಯಿಸುತ್ತಾರೋ ಅವರನ್ನು ಆತ ಯಾವಾಗಲೂ ರಕ್ಷಿಸುತ್ತಾನೆ.

**ಮ**ನಸ್ಸು ಪವಿತ್ರವಾಗಿದ್ದರೆ ಏಕಾಗ್ರತೆ, ಧ್ಯಾನ ಯಾಕೆ ಸಾಧ್ಯವಾಗದು? ದೇವರ ದರ್ಶನ ಯಾಕೆ ಉಂಟಾಗದು? ಜಪ ಮಾಡಲು ಕುಳಿತಾಗ ದೇವರ ನಾಮ ಮನಸ್ಸಿನಿಂದ ನಿರಂತರ ತಾನಾಗಿಯೇ ಮೇಲೇಳುವುದು, ಅದಕ್ಕೆ ಪ್ರಯತ್ನ ಬೇಕಾಗಿಯೇ ಇಲ್ಲ.